SEPTEMBER 28, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ವಿಶ್ವ ಪ್ರವಾಸೋದ್ಯಮ ದಿನ; ರಾಜ್ಯದ ಹನ್ನೆರಡು ನೂರು ಪ್ರವಾಸಿ ತಾಣಗಳ, ಮೇಲ್ದರ್ಜೆಗೆ ಕ್ರಮ.**
- **ರಾಜ್ಯದ ಮೊದಲ, ರೈತ ಉತ್ಪಾದಕರ ಕಂಪೆನಿ, ಸಹಜ ಆರ್ಗ್ಯಾನಿಕ್ಸ್‌ನಿಂದ, 28 ಕೋಟಿ ರೂಪಾಯಿ ವಹಿವಾಟು.**
- **ಇಂದು, 'ವಿಶ್ವ ರೇಬಿಸ್ ಜಾಗ್ರತಿ ದಿನಾಚರಣೆ'; ಉಚಿತ ಲಸಿಕೆ ನೀಡಿಕೆ.**
- **ಮನ್ ಕಿ ಬಾತ್; ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ ಮನದ ಮಾತು.**

<><><>

**ಈಗ ವಾರ್ತೆಗಳ ವಿವರ**

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು, ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ನಾಲ್ವರು ಸೇರಿದಂತೆ, ದೇಶದ ವಿವಿಧ ಹೈಕೋರ್ಟ್‌ಗಳಿಗೆ, ಒಟ್ಟು 24 ನ್ಯಾಯಮೂರ್ತಿಗಳನ್ನು ನೇಮಿಸಿ, ಆದೇಶಿಸಿದ್ದಾರೆ. ಕರ್ನಾಟಕ ಹೈಕೋರ್ಟ್‌ಗೆ, ಖಾಯಂ ಹಾಗೂ ಹೆಚ್ಚುವರಿ ಸೇರಿ, ಒಟ್ಟು ನಾಲ್ವರು ನ್ಯಾಯಮೂರ್ತಿಗಳನ್ನು ನೇಮಿಸಲಾಗಿದೆ.**

<><><>

**'ಸುಸ್ಥಿರ ಪರಿವರ್ತನೆಗಾಗಿ, ಪ್ರವಾಸೋದ್ಯಮ' ಧ್ಯೇಯದೊಂದಿಗೆ, ವಿಶ್ವ ಪ್ರವಾಸೋದ್ಯಮ ದಿನವನ್ನು, ರಾಜ್ಯಾದ್ಯಂತ ಆಚರಿಸಲಾಯಿತು.**

<><><>

**ರಾಜ್ಯ ಸರ್ಕಾರ, ಸಾವಿರದ 200 ಪ್ರವಾಸಿ ತಾಣಗಳನ್ನು ಗುರುತಿಸಿದ್ದು, ಆ ಪೈಕಿ, 48 ಪ್ರಮುಖ ಸ್ಥಳಗಳು, ಗದಗ ಜಿಲ್ಲೆಯಲ್ಲಿವೆ. ರಾಜ್ಯದ ಎಲ್ಲ ಪ್ರವಾಸಿ ತಾಣಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು, ಪ್ರವಾಸೋದ್ಯಮ ಖಾತೆ ಸಚಿವ, ಎಚ್.ಕೆ. ಪಾಟೀಲ, ತಿಳಿಸಿದ್ದಾರೆ. ಗದಗ ತಾಲೂಕು, ನಾಗಾವಿ ಗ್ರಾಮದ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಜರುಗಿದ, ವಿಶ್ವ ಪ್ರವಾಸೋದ್ಯಮ ದಿನಾಚರಣೆಗೆ ಚಾಲನೆ ನೀಡಿ, ಅವರು ಮಾತನಾಡಿದರು. ಕಪ್ಪತ್ತಗುಡ್ಡ, ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯ, ವಿಶ್ವ ಪಾರಂಪರಿಕ ತಾಣವೆಂದು, ಯುನೆಸ್ಕೋದಿಂದ ಶೀಘ್ರ ಮಾನ್ಯತೆ ಪಡೆಯಲಿರುವ, ಲಕ್ಕುಂಡಿಯ 101 ಬಾವಿ ಹಾಗೂ ದೇವಸ್ಥಾನಗಳು ಗದಗ ಜಿಲ್ಲೆಯ ವಿಶೇಷತೆ ಎಂದರು.**

<><><>

ಬೆಳಗಾವಿ ಜಿಲ್ಲೆಯ, ಐತಿಹಾಸಿಕ ಕಿತ್ತೂರಿನಲ್ಲಿ ಆಯೋಜಿಸಿದ್ದ, ವಿಶ್ವ ಪ್ರವಾಸೋದ್ಯಮ ದಿನಾಚರಣೆಗೆ, ಶಾಸಕ ಬಾಬಾಸಾಹೇಬ ಪಾಟೀಲ, ಚಾಲನೆ ನೀಡಿದರು.

<><><>

ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲೂಕಿನ, ಐತಿಹಾಸಿಕ ತಾಣ ಐಹೊಳೆಯಲ್ಲಿ, ರಾಜ್ಯಸಭಾ ಸಂಸದ, ನಾರಾಯಣಸಾ ಭಾಂಡಗೆ, ಪ್ರವಾಸೋದ್ಯಮ ದಿನಾಚರಣೆಗೆ ಚಾಲನೆ ನೀಡಿದರು.

<><><>

ಬಳ್ಳಾರಿ ಜಿಲ್ಲೆಯ, ಏಕಶಿಲಾ ಬೆಟ್ಟ, ಸಂಗನಕಲ್ಲಿನ ನವ ಶಿಲಾಯುಗದ ಪಳೆಯುಳಿಕೆಗಳು, ಮಿಂಚೆರೆರಿ ಬೆಟ್ಟ, ಸಂಡೂರಿನ ಪ್ರಾಕೃತಿಕ ತಾಣಗಳನ್ನು, ಜಾಗತಿಕ ಭೂ ಪಟದಲ್ಲಿ ಗುರುತಿಸುವಂತೆ, ರೂಪಿಸಬೇಕಿದೆ ಎಂದು, ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ, ಆಶಿಸಿದ್ದಾರೆ. ಬಳ್ಳಾರಿಯ, ರಾಬರ್ಟ್ ಬ್ರೂಸ್‌ಫುಟ್, ಸಂಗನಕಲ್ಲು ಪುರಾತತ್ವ ವಸ್ತುಸಂಗ್ರಹಾಲಯ, ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ, ನಗರದ ಕೋಟೆ ಮುಂಭಾಗದಲ್ಲಿ ಜರುಗಿದ, ಪ್ರವಾಸೋದ್ಯಮ ದಿನಕ್ಕೆ, ಚಾಲನೆ ನೀಡಿ, ಮಾತನಾಡಿದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಯುನೆಸ್ಕೋ ವಿಶ್ವ ಪರಂಪರೆ ತಾಣವಾದ, ಹಂಪಿಯನ್ನು ಸಂಪೂರ್ಣ ಪ್ಲಾಸ್ಟಿಕ್ ಬಳಕೆ ಮುಕ್ತ ಮಾಡಲು, ಸಂಕಲ್ಪಿಸಲಾಗಿದೆ ಎಂದು, ಪುರಾತತ್ವ ಇಲಾಖೆ ಅಧೀಕ್ಷಕ ದೇವರಾಜ ತಿಳಿಸಿದ್ದಾರೆ. ಹಂಪಿಯ ವಿಜಯ ವಿಠಲ ದೇವಸ್ಥಾನದ ಮುಂಭಾಗದಲ್ಲಿ, ಪ್ರವಾಸೋದ್ಯಮ ದಿನಾಚರಣೆಗೆ ಚಾಲನೆ ನೀಡಿ, ಮಾತನಾಡಿದರು.

<><><>

ರಾಜ್ಯದ ಮೊದಲ, ರೈತ ಉತ್ಪಾದಕರ ಕಂಪೆನಿ ಎಂಬ ಹೆಗ್ಗಳಿಕೆಯ, ಸಹಜ ಸಮೃದ್ಧ ಸಾವಯವ ಉತ್ಪಾದಕರ ಕಂಪೆನಿ, ಸಾವಯವ ಕೃಷಿ ಪ್ರೀತಿಯ ರೈತರು ಮತ್ತು ಆಸಕ್ತರು ಸೇರಿ ರೂಪಿಸಿದ, 15 ವರ್ಷಗಳ ಹರೆಯದ ಸಂಸ್ಥೆ. ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಭಾಗವಾಗಿ, ಸಹಜ ಆರ್ಗ್ಯಾನಿಕ್ಸ್ 2010 ರಲ್ಲಿ, ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಆರಂಭದಲ್ಲಿ ಸಾಕ ್ಟ ಹಿನ್ನಡೆ ಅನುಭವಿಸಿ, ಗಟ್ಟಿಯಾಗಿ ನೆಲೆ ನಿಂತು, ಪ್ರಸ್ತುತ 28 ಕೋಟಿ ರೂಪಾಯಿ ವಹಿವಾಟು ನಡೆಸಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಹಜ ಆರ್ಗ್ಯಾನಿಕ್ಸ್ ಸಿ.ಇ.ಓ. ಬಿ. ಸೋಮೇಶ.

<><><>

ಸಹಜ ಆರ್ಗ್ಯಾನಿಕ್ಸ್ ಸಿ.ಇ.ಓ. ಬಿ. ಸೋಮೇಶ ಧ್ವನಿ 45 ಸೆಕೆಂದುಗಳು

<><><>

ತ್ಯಾಗವೀರ ಶಿರಸಂಗಿ ಲಿಂಗರಾಜ ಸರದೇಸಾಯಿ ಅವರ ವಾಡೆಯನ್ನು, ವಿಶೇ ’ ಸ್ಮಾರಕವಾಗಿ ರೂಪಿಸಲಾಗುವುದು ಎಂದು, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು, ಶಿರಸಂಗಿಯ ವಾಡೆಗೆ ತೆರಳಿ, ದೇಸಾಯರ ಭಾವಚಿತ್ರಕ್ಕೆ ಪು ್ಪ ನಮನ ಸಲ್ಲಿಸಿ, ಮಾತನಾಡಿದರು. ಕರ್ನಾಟಕವನ್ನು ಶೈಕ್ಷಣಿಕವಾಗಿ ಬೆಳಗಿದ, ಪೂಜ್ಯ ಶಿರಸಂಗಿ ಲಿಂಗರಾಜ ದೇಸಾಯರು, ಲಿಂಗಾಯತ, ವೀರಶೈವ ಸಮಾಜದ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ, ಪೂಜ್ಯ ಹಾನಗಲ್ಲ ಕುಮಾರಸ್ವಾಮಿಗಳ ಸಾನಿಧ್ಯದಲ್ಲಿ, ಅಖಿಲ ಭಾರತ ವೀರಶೈವ ಮಹಾಸಭೆ ಸ್ಥಾಪಿಸಿ, ಅಪಾರ ಮೊತ್ತದ ದೇಣಿಗೆ ನೀಡಿದರು ಎಂದು, ಸ್ಮರಿಸಿದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(43 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ.

<><><>

ಅಟಲ್ ಪಿಂಚಣಿ ಯೋಜನೆ ಮೂಲಕ, ಸ್ವಯಂಪ್ರೇರಿತ ಉಳಿತಾಯವನ್ನು ಉತ್ತೇಜಿಸಲು, ಫಲಾನುಭವಿ ವಯಸ್ಸು ಮತ್ತು ಕೊಡುಗೆಯ ಮೊತ್ತ ಆಧರಿಸಿ, ಪ್ರಾಥಮಿಕವಾಗಿ ಅನೌಪಚಾರಿಕ ವಲಯದ, ಬಡ ಮತ್ತು ಹಿಂದುಳಿದ ಕಾರ್ಮಿಕರನ್ನು ಗುರಿಯಾಗಿಟ್ಟುಕೊಂಡು, ನಿವೃತ್ತಿ ಬಳಿಕ, ಸಾಮಾಜಿಕ ಭದ್ರತೆ ಒದಗಿಸುವ ಉಪಕ್ರಮವಾಗಿ, ವಿನ್ಯಾಸಗೊಳಿಸಲಾಗಿದೆ. ಪ್ರಸಕ್ತ **2025**ರ ಆರಂಭದಲ್ಲಿ, ಅಟಲ್ ಪಿಂಚಣಿ ಯೋಜನೆ, **8** ಕೋಟಿ ಚಂದಾದಾರರನ್ನು ಹೊಂದಿ, **45** ಸಾವಿರ ಕೋಟಿ ರೂಪಾಯಿ ನಿಧಿ ಸಂಗ್ರಹಿಸಿದೆ. ಮಹಿಳಾ ಚಂದಾದಾರರ ಸಂಖ್ಯೆ, ಶೇಕಡ **48** ರಷ್ಟಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ಅಟಲ್ ಪೆನ್ಷನ್ ಯೋಜನೆ, ವೃದ್ಧಾಪ್ಯದಲ್ಲಿ ಆರ್ಥಿಕ ಸ್ವಾವಲಂಬನೆಯ ಸಾಧನ ಎಂದು, ಬಣ್ಣಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ **33** ಸೆಕೆಂದುಗಳು

<><><>

ಇಂದು, 'ವಿಶ್ವ ರೇಬಿಸ್ ಜಾಗ್ರತಿ ದಿನಾಚರಣೆ'. 'ನೀವು, ನಾವು ಹಾಗೂ ಸಮುದಾಯ ಈಗಲೇ ಕಾರ್ಯಪ್ರವೃತ್ತರಾಗೋಣ', ಎಂಬ ಧ್ಯೇಯದೊಂದಿಗೆ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ, ರಾಜ್ಯಾದ್ಯಂತ ಉಚಿತ ರೇಬಿಸ್ ಲಸಿಕೆ ಅಭಿಯಾನ ಆಯೋಜಿಸಿದೆ. ಪಶು ವೈದ್ಯಕೀಯ ಪಾಲಿ ಕ್ಲಿನಿಕ್, ಪಶು ಚಿಕಿತ್ಸಾಲಯಗಳಲ್ಲಿ, ನಾಯಿಗಳಿಗೆ ಉಚಿತವಾಗಿ ರೇಬಿಸ್ ಲಸಿಕೆ ನೀಡಲು, ಇಲಾಖೆ ವ್ಯವಸ್ಥೆ ಮಾಡಿದೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ, ರೇಬಿಸ್ ಲಸಿಕೆ ನೀಡಿಕೆ ಅಭಿಯಾನ ಆಯೋಜಿಸಲಾಗಿದ್ದು, ಶ್ವಾನಗಳ ಮಾಲಿಕರು, ತಮ್ಮ ಸಾಕು ನಾಯಿಗಳಿಗೆ ಉಚಿತವಾಗಿ ಲಸಿಕೆ ಹಾಕಿಸುವಂತೆ, ಪಶು ವೈದ್ಯಕೀಯ ಇಲಾಖೆಯ, ಜಿಲ್ಲಾ ಉಪ ನಿರ್ದೇಶಕ ಡಾಕ್ಟರ್ ರಂಗಪ್ಪ ಕೋರಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ 'ಮನ್ ಕೀ ಬಾತ್' ಮೂಲಕ, ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಅನಿಸಿಕೆ ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 126ನೇ ಆವೃತ್ತಿಯಾಗಿದೆ. ಮನದ ಮಾತು, ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎ.ಐ.ಆರ್. ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಸಹ ಪ್ರಸಾರವಾಗಲಿದೆ. ಹಿಂದಿ ಅವತರಣಿಕೆಯ ನಂತರ, ಪ್ರಾದೇಶಿಕ ಭಾ ಿಗಳಲ್ಲಿ ಕಾರ್ಯಕ್ರಮ ಮೂಡಿಬರಲಿದೆ.

<><><>

'ನಶಾ ಮುಕ್ತ ಭಾರತ' ಸಂಕಲ್ಪದೊಂದಿಗೆ, ಬಿ.ಜೆ.ಪಿ. ಯುವ ಮೋರ್ಚಾ, 'ನಮೋ ಯುವ ರನ್', ಬಳ್ಳಾರಿ ನಗರದಲ್ಲಿ, ಆಯೋಜಿಸಿತ್ತು. ಕನಕ ದುರ್ಗಮ್ಮ ದೇವಸ್ಥಾನದಿಂದ ಆರಂಭಗೊಂಡ ಮ್ಯಾರಥಾನ್, ಗಡಗಿ ಚೆನ್ನಪ್ಪ ವೃತ್ತದ ಮೂಲಕ, ಎಚ್.ಆರ್.ಗವಿಯಪ್ಪ ವೃತ್ತದ ವರೆಗೆ ನಡೆಯಿತು. ನಮೋ ಯುವ ರನ್ ಮ್ಯಾರಥಾನ್ ನಲ್ಲಿ, ಬಳ್ಳಾರಿಯ 9 ಕಾಲೇಜುಗಳ ವಿದ್ಯಾರ್ಥಿಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು. ಮಾದಕ ವಸ್ತುಗಳ ಬಳಕೆ, ಆರೋಗ್ಯಕ್ಕೆ ಸಂಚಕಾರ ಎಂದು, ವಿದ್ಯಾರ್ಥಿಗಳು ಜನಜಾಗೃತಿ ಮೂಡಿಸಿದರು.

<><><>

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, 124ನೇ ಸರ್ವ ಸದಸ್ಯರ ವಾರ್ಷಿಕ ಸಭೆ, ಇಂದು ಬೆಳಗ್ಗೆ 11 ಗಂಟೆಗೆ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಆಯೋಜಿಸಲಾಗಿದೆ ಎಂದು, ಸಂಘದ ಪ್ರಧಾನ ಕಾರ್ಯದರ್ಶಿ, ಶಂಕರ ಹಲಗತ್ತಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವಿಶ್ವ ಪ್ರವಾಸೋದ್ಯಮ ದಿನ; ರಾಜ್ಯದ ಹನ್ನೆರಡು ನೂರು ಪ್ರವಾಸಿ ತಾಣಗಳ, ಮೇಲ್ದರ್ಜೆಗೆ ಕ್ರಮ.
- ರಾಜ್ಯದ ಮೊದಲ, ರೈತ ಉತ್ಪಾದಕರ ಕಂಪೆನಿ, ಸಹಜ ಆರ್ಗ್ಯಾನಿಕ್ಸ್‌ನಿಂದ, 28 ಕೋಟಿ ರೂಪಾಯಿ ವಹಿವಾಟು.
- ಇಂದು, 'ವಿಶ್ವ ರೇಬಿಸ್ ಜಾಗ್ರತಿ ದಿನಾಚರಣೆ'; ಉಚಿತ ಲಸಿಕೆ ನೀಡಿಕೆ.
- ಮನ್ ಕಿ ಬಾತ್; ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ ಮನದ ಮಾತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>